Regd No B G 155 Sri 3—5—1965

ಸತ್ಯವಾದಿ

48 th Year
Satyavadi
DAILY
MYSORE 4

ಸಂಸ್ಥಾಪಕರು – ಅವಮಸೆಸಂಸ್ಥೇದಾರ್ ಎಂ ಎ ಸುಬ್ಬರಾಯುಡು ಸಂಪಾದಕರು – ಧರ್ಮಪ್ರಚಾರವಿಂತ ಎಂ ಎಸ್ ಕೃಷ್ಣಂರವ್ 2 ಪೈಸೆ

ತಿರುಪತಿ ಶಾಲೆ

ತಿರುಪತಿಯಲ್ಲಿ ಕೇಂದ್ರ ಪಾಠಶಾಲೆಯೊಂದು ಭಾರತದ ವಿದ್ಯಾ ಸಚಿವಾಲಯದ ಆಶ್ರಯದಲ್ಲಿ ಮುಂದಿನ ತಿಂಗಳು ಪ್ರಾರಂಭವಾಗಲಿದ್ದು ಅಲ್ಲಿ ಇಂಗ್ಲೀಷು, ಹಿಂದಿ, ಸಂಸ್ಕೃತ ಶಿಕ್ಷಣ ಮಾಧ್ಯಮವಾಗಿರುವುದು.

ಮಜಾ

ಮೈಸೂರು ಎಜ್ ಜಿ ಓ ಸಂಘದ ಅಧ್ಯಕ್ಷೆ ಶ್ರೀಮತಿ ವೇರಿ ದೇವಾಸಿಯಾರವನ್ನು ಮೈಸೂರು ಸರ್ಕಾರದ ಕೆಲಸದಿಂದ ತೆಗೆದಿದೆ.

ಮದ್ರಾಸಿಗೆ ಕಾವೇರಿ

ಕಾವೇರಿ ನೀರನ್ನು ಮದರಾಸಿಗೆ ಕೊಡುವದು ನಾಳ್ಕನೇ ಯೋಜನೆಯಲ್ಲಿರುವುದಾಗಿ ಕೈಗಾರಿಕಾ ಮಂತ್ರಿ ಶ್ರೀ ಆರ್. ವೆಂಕಟರಾವ್ ತಿರುಚಿಯಲ್ಲಿ ನುಡಿದರು

ರಾಜ್ಯಪಾಲರು

ಮಂತ್ರಿಮಂಡಲ ಹಾಗೂ ಜನತೆಯ ವಿಚಾರದಲ್ಲಿ ರಾಜ್ಯಪಾಲರು ತೊಂಡಿಯಾಂತಿದ್ದು ಅಡಳಿತದ ದಿನಚರಿ ವಿಚಾರದಲ್ಲಿ ಅವರು ಶೈಹಾಕದೆ ಸಹಕರಿಸಬಹುದೆಂದು ರಾಜ್ಯಪಾಲರಾದ ಶ್ರೀ ಏ ವಿ ಗೀಯವರು ಬೆಂಗಳೂರಿನಲ್ಲಿ ತಿಳಿಸಿದರು

ನಿರಾಕರಣೆ

ಅಯೂಬರ ಅಕಾಶವಾಣಿ ಭಾಷಣ ಕುರಿತು ಸಮಾಲೋಚಿಸಲು ಪ್ರಧಾನಿ ಶಾಸ್ತ್ರಿಯವರು ನಿರಾಕರಿಸಿದರು.

★

ನಾಳೆಯ ಪಂಚಾಂಗ

ವೈವಜ್ಞ ಶಿಖಾಮಣಿ
ಅನಾಥಸಮಾಜಾಪಧ್ಯಾಯ ಧರ್ಮಾಧಿಕಾರಿ
ರಾಜಕಾರ್ಯಾಪಕ್ಷ, ಜ್ಯೋತಿರ್ವಿದ್ವತ್ಸಭೆ
ಸಂಪಕ್ಕ ಕೃಷ್ಣಜೋಯಿಸರಿಂದ

4 ಮಂಗಳವಾರ ತದಿಗೆ ರೋಹಿಣಿ

ಬಂಧನ

ದೊಡ್ಡ ಬಳ್ಳಾಪುರ ತಾಲ್ಲೂಕಿನ ಒಂದು ಗ್ರಾಮದ ಭೂವಿವಾದದಲ್ಲಿ ಈ ತಿಂಗಳ ಹದಿನಾರನೆ ತಾರೀಖಿನಂದು ಗಲಭೆ ಉಂಟಾಗಿ ಒಂದು ಚಿಕ್ಕ ಮಹಿಳೆಯ ಸೇರಿದಂತೆ ಮೂವರು ಬೆಂಗಳೂರು ಪಾರ್ಟಿ ಸಲವತ್ತೆಂಟು ನಾಗರಿಕರನ್ನು ಬಂಧಿಸಲಾಗಿದೆ. ಒಂದು ಕಡೆ ತಿರುಪತಿ ಮುಖಂಡರಿದ್ದು ಮತ್ತೊಂದು ಕಡೆ ಗೊತ್ತಾಗದ ಕೈವಸೆ ಇದೆ. ಸುಮಾರು ಒಂದೂವರೆ ಸಾವಿರ ರೂಪಾಯಿಗಳ ಬೆಲೆಯ ಇದನ್ನು ಗ್ರಾಮಸ್ಥರು ಸರ್ಕಾರಕ್ಕೆ ತಿಳಿಸದೇ ಇದ್ದುದಕ್ಕೆ ತೊಂದರೆಗೆ ಸಿಕ್ಕಿರುವರು. ಮೂವರು ಬಂಧನವಾಗಿದೆ.

ಆಯೂಬ್ ಹೇಳಿಕೆ

ಪಾಕಿಸ್ತಾನದ ವಿಚಾರದಲ್ಲಿ ಭಾರತದ ಜಿದರಿಕೆಯು ಸಾಧಾರಣ ಪುತ್ರು ಸರಿಪೂರ್ಣ ಯುದ್ಧಕ್ಕೆ ಮಾರ್ಗವಾಗಿ ಎಂತೆ ಇದೆಯೆಂದು ಅಧ್ಯಕ್ಷ ಅಯೂಬರು ಪ್ರಸಾರ ಭಾಷಣದಲ್ಲಿ ತಿಳಿಸಿದರು

ಹಿತೋಕ್ತಿ

ಶಂಜಾವೂರಿನಲ್ಲಿ ಭಾರತದ ಉಪಾಧ್ಯಕ್ಷ ಡಾ|| ಜಕೀರ್ ಹುಸೇನರು ಭಾರತದ ಮುಸ್ಲಿಮರಿಗೆ ಮನವಿ ಮಾಡಿ, ಅವರು ಇಸ್ಲಾಂ ತತ್ವವನುಸರಿಸಿ ತಮ್ಮ ಸಹ ಮಾನವರೊಂದಿಗೆ ಶಾಂತಿ ಹಾಗು ಗೆಳತನವನ್ನು ಅಭ್ಯುದಯಗೊಳಿಸಿ, ಭಾರತವನ್ನು ಭದ್ರ ರೀತಿಯಲ್ಲಿ ಕಟ್ಟಲು ತಮ್ಮ ಭಾಗದ ನೆರವು ನೀಡಬೇಕೆಂದು ತಿಳಿಸಿದರು

—

ಭಾರತ - ಪಾಕಿಸ್ತಾನ ಸಮಾಧಾನ ಗುಂಪಿನ ಅನೇಕರು ನವ ದೆಹಲಿಯಲ್ಲಿ ಒಂದು ಜಂಟಿ ಹೇಳಿಕೆಯಿತ್ತು, ಅಯೂಬರು ಮತ್ತು ಶಾಸ್ತ್ರಿಯವರು ಉನ್ನತ ಮಟ್ಟದ ಮಾತುಕತೆ ನಡೆಸಿ ಗಡಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂದು ತಿಳಿಸಿರುವುದಾಗಿ ನವ ದೆಹಲಿ ವಾರ್ತೆ.

ಸಮಾಚಾರ ಸಂಗ್ರಹ

ವಿಶಾಂತರಗಳಿಂದ ಹಿಂದೂ ಜನರ ಸಂಖ್ಯೆ ಇಳಿಮುಖವಾದ ಇದನ್ನ ತಡೆಗಟ್ಟಲು ಧರ್ಮ ಗುರುಗಳು ಹೊಸೆಗಾಲ ರಾಗಬೇಕು ಎಂದು ಕೂಡ್ಲಿ ಶೃಂಗೇರಿ ಮಠ ಸಮ್ಮುಖದಲ್ಲಿ ಶ್ರೀರಾಮೋತ್ಸವ ಸಂದರ್ಭದಲ್ಲಿ ಸೌಂದಭೆಯ ಸದಸ್ಯ ಡಾ|| ಬಿ ಜೆ ದಾಸ್ತಾಂವರು ತಿಳಿಸಿದರು.

★

ಭಾರತ ಸರ್ಕಾರದ ಆರೋಗ್ಯಮಂತ್ರಿ ಡಾ|| ಸುಶೀಲ ನಯ್ಯಾರರು ತಿರುಪತಿಯಲ್ಲಿ ಪ್ರಾದಿ ಮತ್ತು ಗ್ರಾಮ ಕೈಗಾರಿಕೆ ಪ್ರದರ್ಶನವನ್ನು ಉದ್ಘಾಟಿಸಿದರು.

★

ಕಚ್ ವಿಚಾರದಲ್ಲಿ ಶಂಕ್ಷ ಮಂತ್ರಿ ಪಂಡಲದಲ್ಲಿ ಭಿನ್ನಾಭಿಪ್ರಾಯವಿಲ್ಲವೆಂಬುದಾಗಿ ಪ್ರಧಾನಿ ಶಾಸ್ತ್ರಿಯವರು ನವ ದೆಹಲಿಯಲ್ಲಿ ತಿಳಿಸಿದರು: ಪಾಕಿಸ್ತಾನದ ಮೇಲೆ ಭದ್ರಪಾದ ಕ್ರಮ ತೆಗೆದುಕೊಳ್ಳುವಂತೆ ವಾರ್ತಿವೆಂಟಿನ ಸದಸ್ಯರು ಒತ್ತಾಯ ಮಾಡಿರುವದು ಹೊಂಪಟ್ಟಿದೆ.

★

ವಾಷಿಂಗ್ಟನ್ನಿನ ವಾರ್ತೆಯು ಪ್ರಕಾರ ಪಾಕಿಸ್ತಾನ ಅಮೆರಿಕಾ ಶಸ್ತ್ರಾಸ್ತ್ರಗಳನ್ನು ಭಾರತದ ಮೇಲೆ ಉಪಯೋಗಿಸಿದ ವಿಷಯ ಅಮೆರಿಕದವರ್ಷಾಲೋಚನೆಯಲ್ಲಿದೆ ಎಂದು ಹೇಳಲಾಗಿದೆ.

★

ಕಚ್ ಸಿಂಧ್ ಗಡಿಯಲ್ಲಿ ಮೊಸ್ತೆ ಪರಿಸ್ಥಿತಿ ಹಾಗೇ ಇತ್ತು ವ.ಧ್ಯೆ ವ.ಧ್ಯೆ ನಿಸ್ಯಬ್ದ ಹಾಗೂ ಹೆಲ್ಲೂ ಹೊಡೆಕವಿಲ್ಲ.

★

ರಾಜಸ್ತಾನ ಗಡಿಯಲ್ಲಿ ಪಾಕಿಸ್ತಾನ ಚಟುವಟಿಕೆ ಹೆಚ್ಚಿದೆ.

★

ಜೂಜಿನ ಕಾನೂನನ್ನು ಬಿಗಿ ಮಾಡಬೇಕೆಂದು ಆಂಧ್ರ ಸರ್ಕಾರ ನಿರ್ಧರಿಸಿದೆ.

★

ಅಮೇರಿಕಾ ಅಧಿಕಾರಿಗಳು ಕಚ್‌ದ ರಣ ಗಡಿಗೆ ಭೇಟಿಕೊಡಬಹುದೆಂದು ನವ ದೆಹಲಿ ವಾರ್ತೆ.

ಕಾಲರಾ ಪರಿಸ್ಥಿತಿ

ಕಳೆದ ತಿಂಗಳ 30 ನೇ ತಾ|| ಸಂದು ಮೈಸೂರು ನಗರದಲ್ಲಿ 548 ಮಂದಿಗೆ ಕಾಲರಾ ನಿರೋಧಕ ಇನಾಕ್ಯುಲೇಷನ್ ಹಾಕಿದೆ ಆರಂಭದಿಂದ ಇಲ್ಲಿಯ ವರೆಗೆ 185855 ಮಂದಿಗೆ ಕಾಲರಾ ನಿರೋಧಕ ಇನಾಕ್ಯುಲೇಷನ್ ಹಾಕಿದೆ ಸಾಧಾರಣವಾಗಿ ಎಲ್ಲಾ ಸ್ಥಳಗಳಲ್ಲೂ ಕಾಲರಾ ನಿರೋಧಕ ಇನಾಕ್ಯುಲೇಷನ್ ಹಾಕಿಸಿಕೊಳ್ಳಲು ಜನರು ಹೆಚ್ಚಾಗಿ ಮುಂದಾಗಿಲ್ಲ ಎಂದು ಪೌರಸಭಾ ಆರೋಗ್ಯಾಧಿಕಾರಿಯವರು ತಿಳಿಸುತ್ತಾರೆ

× ಇನ್ನು 3 ವಾರ ನಿರ್ಬಂಧಿತ ವೇಳೆಯಲ್ಲಿ ಮೈಸೂರು ನಗರದಲ್ಲಿ ಹೋಟಲ್ಲು ತೆಗೆಯಲು ಅವಕಾಶ ದೊರೆಯುವುದೆಂದು ಗೊತ್ತಾಗಿದೆ.

★

ಕಚ್ ಗಡಿ ಪರಿಸ್ಥಿತಿ ಕುರಿತು ಈ ದಿನ ರಾಜ್ಯ ಸಭೆ ಚರ್ಚಿಸುವುದು.

ಹಿಂದೂಸ್ತಾನ ಮೆಷಿನ್ ಟೂಲ್ಸ್‌ನ ರೂ ಇಪ್ಪತ್ತು ಲಕ್ಷ ರೂಪಾಯಿಗಳ ಬೆಲೆ ಬಾಳುವ ಉಪಕರಣಗಳನ್ನು ಪೋಲೀಸರು ವಶಪಡಿಸಿಕೊಳ್ಳುವ ಒಪ್ಪಂದವಾಗಿದೆ

ಮೇ 1 ರಂದು ಮಾಸ್ಕೋದಲ್ಲಿ ದಿನಾಚರಣೆ ವೈಭವದಿಂದನಡೆಯಿತು ಸಾರ್ವಜನಿಕ ಪ್ರದರ್ಶನ ಪೆರೇಡು ನಡೆಯಿತು

ಕಾಶ್ಮೀರದ ಶ್ರೀನಗರದಲ್ಲಿ ಕಚ್ ನಿಂಧದ ಗಡಿಗೆ ಅಮೇರಿಕಾ ಅಧಿಕಾರಿಗಳು ಭೇಟಿಯಿತ್ತರು

ನೇಪಾಳದ ಅಭಿವೃದ್ಧಿಗಾಗಿ ಭಾರತ ವಾಣಿಜ್ಯೋದ್ಯಮಿಗಳು ಅಲ್ಲಿ ಜಂಟಿ ಪ್ರಯತ್ನಗಳಿಗೆ ಹಣತಾಳುವಂತೆ ಪ್ರಧಾನಿ ಶಾಸ್ತ್ರಿಗಳು ನವ ದೆಹಲಿಯಲ್ಲಿ ತಿಳಿಸಿದರು

ಹೋಟಲಿನವರ ಅರ್ಜಿ

ನಿನ್ನೆ ಶ್ರೀ ಎಂ. ವೆಂಕಟಲಿಂಗಪ್ಪ ನವರ ಅಧ್ಯಕ್ಷತೆಯಲ್ಲಿ ನೇರಿದ್ದ ಪೌರ ಸಭೆಯ ವಿಶೇಷ ಸಭೆಯಲ್ಲಿ ಹೋಟಲಿನವರ ಅರ್ಜಿ ಪರಿಶೀಲನೆ ಬಗ್ಗೆ ಕ್ರಮ ತೆಗೆದುಕೊಳ್ಳಲು ಕಮಿಷನರಿಗೆ ಅಧಿಕಾರ ಕೊಡಲಾಯಿತು

ದಾಂಪತ್ಯ ಧರ್ಮ

(ವ್ಯಂದುನರಿದುದು)

ಯಾವ ಪತ್ನಿಯು, ಜಾಜಾಟ ಮೊದಲಾದುದರಿಂದ ಕರ್ತವ್ಯಭ್ರಷ್ಟನಾಗಿರುವನೋ ಅಥವಾ ಕಳ್ಳು ಮೊದಲಾದುದನ್ನು ಕುಡಿಯುವುದರಿಂದ ಮದವುಳ್ಳವನು ಇಲ್ಲವೇ ರೋಗಪೀಡಿತನಾದವನ ಸೇವಾದಿಗಳನ್ನು ಮಾಡದೇ ತಿರಸ್ಕರಿಸುತ್ತಾಳೋ ಅಕೆಯು ಅಧಿಕಾರ ಪ್ರಾಪ್ತಿಗೆ ಮೊದಲಾದುದನ್ನು ಕಸಿದುಕೊಂಡು ಅಕೆಯು ಸಂಪತ್ತನ್ನು ಮೂರು ತಿಂಗಳು ಬಿಡತಕ್ಕದ್ದು.

ಪತಿಯು ಹುಚ್ಚನಾದರೆ, ಜಾತಿಭ್ರಷ್ಟನಾದರೆ, ಸಪ್ತುಂಸಕನಾದರೆ, ಕೇತಸ್ಸಿನ ದೋಷದಿಂದಲೂ ಏಂತಾನ ಆಗದೇ ಇದ್ದಕ್ಕೆ ಕಾರಣರೋಗ ಮೊದಲಾದ ಜನ್ಮಾಂತರದ ಪಾಪದ ವಿಪಾಕರೋಗವುಳ್ಳವನಾದರೆ, ಅವನು ತನ್ನನ್ನು ಸೇವಿಸದಿದ್ದರೂ; ಆ ಪತ್ನಿಯನ್ನು ಎಡಕೂಡದು ಮತ್ತು ಅಕೆಯು ಅಧಿಕಾರಾದಿಗಳನ್ನು ಕಸಿದುಕೊಳ್ಳಕೂಡದು.

ಪತ್ನಿಯು ನಿಕೃಷ್ಟ ನಿಷಿದ್ಧವಾದ ಕಳ್ಳನ್ನು ಕುಡಿಯುತ್ತಿದ್ದರೆ, ದುರಾಚಾರ ಉಳ್ಳವಳಾಗಿದ್ದರೆ, ಪತಿಗೆ ಪ್ರತಿಕೂಲಳಾಗಿದ್ದರೆ, ಸೇವಕರಿಗೆ ಹಿಂಸೆ ಕೊಡತಕ್ಕವಳಾಗಿದ್ದರೆ, ಅತಿಯಾಗಿ ಖರ್ಚುಮಾಡುವವಳಾಗಿದ್ದರೆ, ಪುರುಷನು ಮತ್ತೊಬ್ಬ ಸ್ತ್ರೀಯನ್ನು ವಿವಾಹಮಾಡಿಕೊಳ್ಳಬಹುದು.

ಯಾವ ಪತ್ನಿಯು ಪತಿಗೆ ಅನುಕೂಲಳೂ ಸಾಧ್ವಶೀಲಳೂ ಆಗಿದ್ದರೂ ಅಕೆ ರೋಗಿಷ್ಠರಾಗಿದ್ದರೆ, ಸಮಾಧಾನದಿಂದ ಅವಳ ಒಪ್ಪಿಗೆ ಪಡೆದು ಪುರುಷನು ಬೇರೆ ಮದುವೆ ಮಾಡಿಕೊಳ್ಳಬಹುದು; ಪ್ರಥಮ ಪತ್ನಿಯನ್ನು ಎಂದಿಗೂ ಅವಮಾನಿಸಕೂಡದು.

ಪತಿಗೆ ಅಡುಗೆ ಮಾಡಿ ಬಡಿಸುವುದು ಮುಂತಾದ ಶರೀರ ಸೇವೆಯನ್ನೂ ಭಿಕ್ಷೆ ಕೊಡುವುದು, ಅತಿಥಿಗಳಿಗೆ ಬಡಿಸುವುದು, ಹೋಮದ್ರವ್ಯವನ್ನು ತಯಾರಿಡುವುದು, ಮೊದಲಾದ ಧರ್ಮಕಾರ್ಯವನ್ನೂ ದ್ವಿಜರಿಗೆ ತಂತಮ್ಮ ಜಾತಿಯ ಸ್ತ್ರೀಯರೇ ಮಾಡತಕ್ಕದಿಲ್ಲದೇ ಎಂದಿಗಾದರೂ ಇತರ ಜಾತಿಯ ಸ್ತ್ರೀಯು ಮಾಡಕೂಡದು.

ಕುಲ ಆಚಾರ ಮುಂತಾದುವುಗಳಿಂದ ಉತ್ಕೃಷ್ಟನೂ ಸುಂದರನೂ ಸ್ವಜಾತಿಯವನೂ ಆಗಿರುವ ವರನು ದೊರೆತಿದನೆಂದರೆ ಕನ್ಯೆಗೆ ವಿವಾಹ ಕಾಲವೆನಿಸಿದ ಎಂಟನೆಯು ವರ್ಷವಾಗದಿರುವ ಮೊದಲೂ ಕೂಡ ಬ್ರಾಹ್ಮ ವಿವಾಹಾದಿ ಏಳು ಪ್ರಕಾರ ಅವನಿಗೆ ಕನ್ಯೆಯನ್ನು ದಾನವಾ ಮಾಡಬಹುದು.

ಕನ್ಯೆಯು ಋತುಮತಿಯಾಗಿದ್ದರೂ ಯೋಗ್ಯ ವರನು ಸಿಗದಿದ್ದಕೆ ಅವಳು ಯಾವೇಷ್ಟವಾಗಿ ಮರಣ ಪರ್ಯಂತ ತಂದೆಯು ಮನೆಯಲ್ಲಿಯೇ ಇಲ್ಲಬಹುದು; ಅದರೆ ತಂದೆಯು ತನ್ನ ಕನ್ಯೆಯನ್ನು ವಿದ್ಯೆ ಮೊದಲಾದ ಗುಣಗಳಿಲ್ಲದ ವರನಿಗೆ ಕೊಡಕೂಡದು.

ಕಾರಣವಾಗಿ ಪತಿಯನ್ನು ವರಿಸತಕ್ಕ ಕನ್ಯೆಯು ತಂದೆಯು ಅಥವಾ ತಾಯಿಯು ಇಲ್ಲವೇ ಸಹೋದರನು ಮೊದಲು ತನಗೆ ಕೊಟ್ಟಿದ್ದ ಯಾವುದೊಂದು ಅಲಂಕಾರವನ್ನೂ ಒಯ್ಯಕೂಡದು; ಅದನ್ನು ತಂದಿ ಮೊದಲಾದವರಿಗೆ ಹಿಂದಕ್ಕೆ ಕೊಡದವಳು ಕಳ್ಳತನ ಮಾಡಿದಂತಾಗುವುದು.

ದಂಪತಿಗಳು ಮರಣ ಪರ್ಯಂತವೂ ಧರ್ಮ ಅರ್ಥ ಕಾಮಗಳೆಂಬ ಪುರುಷಾರ್ಥ ಸಂಪಾದನೆಯಲ್ಲಿ ಒಟ್ಟಿಗೆ ಅನ್ಯೋನ್ಯವಾಗಿ ಸಹಕರಿಸಿಕೊಂಡೇ ನಡೆಯಬೇಕೆಂಬುದು ಸ್ತ್ರೀಪುಂಸಾ ಮುಖ್ಯ ಧರ್ಮವೆಂದು ಸಂಕ್ಷೇಪವಾಗಿ ತಿಳಿಯಬೇಕು [ವಿನುಸ್ಮೃತಿಯಿಂದ ಸಂಗ್ರಹಿಸಿದ್ದು ; ಅ. ಸ. ಅಯ್ಯಂಗಾರ್

ವುಡ್‌ಲ್ಯಾಂಡ್ ಜನಪ್ರಿಯ 2 ನೇ ವಾರ

.... ಮನಮೋಹನ ಈಸ್ಟ್‌ಮನ್ ಕಲರ್ ಚಿತ್ರ ....

ಬಾಘಿ (ಹಿಂದಿ) BAGHI

ತಾರಾವರ್ಗ— ಧರ್ಮೇಂದ್ರ, ಲೀಲಾನಾಯ್ಡು, ಹೆಲೆನ್, ಜೀನತ್, ಉಲ್ಲಾಸ್

ಪ್ರತಿದಿನ 3 ಪ್ರದರ್ಶನಗಳು

ಅಪೆರಾ— 30—4—65 ರಿಂದ

ಅಮೋಘ ಕನ್ನಡ ಚಿತ್ರ — ದಿನ 3 ಆಟಗಳು

ಸರ್ವಜ್ಞಮೂರ್ತಿ [ಕನ್ನಡ]

ತಾರಾ— ರಾಜಕುಮಾರ್, ಉದಯಕುಮಾರ್, ಹಂಸಾ, ವೈಜಯಂತಿ, ಬಾಲಕೃಷ್ಣ

SHAKTI

SUDHA

A Superb Tonic

Help The Gorakshana

"ಗೋರಕ್ಷಣಾ" ಕ್ಕೆ ಚೆಂಬಲಿಗರಾಗಿರಿ

ಶ್ರೀ ಧರ್ಮಕರ್ತ ಜಗದ್ಗುರು ಮಹಾಸಂಸ್ಥಾನಿಗಳವರು, ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನಿಗಳವರ ಆದಾರ್ಶಾನುಸಾರ ಸ್ಥಾಪಿಸಲಾಗಿದೆ

ಕರ್ನಾಟಕಾದ್ಯಂತ ಗೋರಕ್ಷಣೆಗೆ ಪ್ರಾಣತೆರೆದು, ಶಾಲೆಗಳನ್ನು, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ

ವಾರ್ಷಿಕ ಚಂದಾ 50 ಪೈಸೆ "ಗೋರಕ್ಷಣಾ" ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Editor: Printed & Published by the Proprietor
Dharma Prachara Nirata M S Krishna Rao
at the Satyavedi Press Gamakshapuram Mysore 4